ಮಂತ್ರಿಗಳ ಆಸ್ತಿ ಮಂತ್ತು ಋಣ ಪಟ್ಟಿಗಳ ಬಗ್ಗೆ

೨೬ (ಬಿ) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಲೋಕಾಯುಕ್ತದ ಮುಂದೆ ಯಾವ ಯಾವ ಮಂತ್ರಿಗಳು ತಮ್ಮ ಆಸ್ತಿ ಮತ್ತು ಋಣ ಪಟ್ಟಿಗಳನ್ನು ಸಲ್ಲಿಸಿಲ್ಲವೋ ಅಂತಹ ಮಂತ್ರಿಗಳ ಪಟ್ಟಿ ?

ಆ) ಆಸ್ತಿ ಮತ್ತು ಋಣ ಪಟ್ಟಿಗಳನ್ನು ಸಲ್ಲಿಸದಿರುವವರ ಮೇಲೆ ಯಾವ ಕ್ರಮ ತೆಗೆದು ಕೊಳ್ಳಲಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು):—

ಅ) ಎಲ್ಲಾ ಮಂತ್ರಿಗಳು ತಮ್ಮ ಆಸ್ತಿ ಮತ್ತು ಋಣ ಪಟ್ಟಿಗಳನ್ನು ಸಲ್ಲಿಸಿದ್ದಾರೆ.

ಆ) ಉದ್ಭವಿಸುವುದಿಲ್ಲಾ

ಸರ್ಕಾರಿ ನೌಕರರ ವರ್ಗಾವಣೆ ಬಗ್ಗೆ

೨೪೬ (ಬಿ) ಶ್ರೀಮತಿ ಮುಕ್ತರುನ್ನೀಸಾ (ನರಸಿಂಹರಾಜ್).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸರ್ಕಾರೀ ನೌಕರರ ವರ್ಗಾವಣೆಯಬಗ್ಗೆ ಐ.ಎ ಎಸ್., ಐ.ಪಿ.ಎಸ್. ಅಧಿಕಾರಿಗಳಿಗಿರುವ ಮಾದರಿಯಲ್ಲಿ ಏಕರೂಪದ ಪದ್ಧತಿಯನ್ನು ಅನುಸರಿಸದಿರಲು ಕಾರಣಗಳೇನು ?

ಆ) ನೌಕರರನ್ನು ಸೇವಾ ನಿಯಮಗಳ ಪ್ರಕಾರ ವರ್ಗಾವಣೆ ಮಾಡಲು ಕ್ರಮ ತೆಗೆದು ಕೊಳ್ಳಲಾಗುವುದೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಮತ್ತು ಆ) ಐ.ಎ ಎಸ್., ಐ.ಪಿ.ಎಸ್ ಅಧಿಕಾರಿಗಳನ್ನೊಳಗೊಂಡಂತೆ ಎಲ್ಲಾ ಸರ್ಕಾರೀ ನೌಕರರ ವರ್ಗಾವಣೆಯ ಬಗ್ಗೆ ಅಧಿಕೃತ ಜ್ಞಾಪನ ಸಂಖ್ಯೆ. ಡಿಪಿಎಆರ್ ೯ ಎಸ್‌ಟಿಆರ್ ೮೪ ದಿನಾಂಕ ೫-೯-೧೯೮೫ರಲ್ಲಿ ಏಕರೂಪದ ಕಾರ್ಯನೀತಿ ಹಾಕಿಕೊಳ್ಳಲಾಗಿದೆ. ಮತ್ತು ಆಡಳಿತ ಹಿತಕ್ಕೆ ವಿಶೇಷ ಮಹತ್ವ ನೀಡಬೇಕಾದ ಚೌಕಟ್ಟಿನಲ್ಲಿ ಏಕರೂಪದ ಕಾರ್ಯನೀತಿಯನ್ನು ಜಾರಿಗೊಳಿಸಲಾಗುತ್ತಿದೆ.

ಬೆಂಗಳೂರು ಮತ್ತು ಮೈಸೂರಿನಲ್ಲಿ ಸಂಭವಿಸಿದ ಘಟನೆಯ ತನಿಖೆಯ ಬಗ್ಗೆ

೨೪೭ ಶ್ರೀಮತಿ ಮುಕ್ತರುನ್ನೀಸಾ (ನರಸಿಂಹರಾಜ).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಮತ್ತು ಮೈಸೂರಿನಲ್ಲಿ ೧೯೯೬ರ ಡಿಸೆಂಬರ್ ೨ನೇ ವಾರದಲ್ಲಿ ಸಂಭವಿಸಿದ ಘಟನೆಗಳ ಬಗ್ಗೆ ತನಿಖೆ ನಡೆಸಲು ನ್ಯಾಯಾಂಗ ತನಿಖೆಯನ್ನು ಸರ್ಕಾರವು ಆದೇಶಿಸಿರುವ ಸಂಗತಿಯು ಸತ್ಯವಲ್ಲವೇ ?

ಆ) ಹಾಗಿದ್ದಲ್ಲಿ, ಸದರಿ ನ್ಯಾಯಾಂಗ ತನಿಖೆಯು ಮುಗಿದಿದೆಯೇ ಮತ್ತು ಹಾಗಿದ್ದಲ್ಲಿ ಇದಕ್ಕೆ ಸಂಬಂಧಿಸಿದ ಯಾವುದೇ ವರದಿಯನ್ನು ಸರ್ಕಾರವು ಸ್ವೀಕರಿಸಿದೆಯೇ ?

ಇ) ಸದರಿ ವರದಿಯನ್ನು ಸರ್ಕಾರವು ಅಂಗೀಕರಿಸಿದೆಯೇ ?

ಈ) ಹಾಗಿದ್ದಲ್ಲಿ, ತಪ್ಪು ಮಾಡಿದ ವ್ಯಕ್ತಿಗಳು ಯಾರು ? ಮತ್ತು ಅವರಂಗಳಿಗೆ ಶಿಕ್ಷೆ ನೀಡಲಾಗಿದೆಯೇ ?

ಉ) ಹಾಗಿರದಿದ್ದಲ್ಲಿ, ಏತಕ್ಕೆ ?